ಶ್ರೀ ಕೆ. ಎಚ್. ಪಾಟೀಲ್.-- ಮಾನ್ಯ ಅಧ್ಯಕ್ಷರೆ, ಮಾನ್ಯ ಲಕ್ಕಪ್ಪನವರು ಹೇಳುವುದು ಛಲೋ ಬೇಡಿಕೆ ಎಂಬುದನ್ನು ಮಾನ್ಯ ಮಂತ್ರಿಗಳು ಒಪ್ಪಿದ್ದಾರೆ. ಆದ್ದರಿಂದ ಅವರು ಸದನಕ್ಕೆ ಹೇಳಬೇಕು. Next year we will grant ಎಂದು ಹೇಳಿದರೆ ಸಾಕು.

ಶ್ರೀ ಬಿ. ಲಕ್ಕಪ್ಪ.-- ಮಾನ್ಯ ಮುಖ್ಯಮಂತ್ರಿಗಳೂ ಆಶ್ವಾಸನೆ ಕೊಟ್ಟಿದ್ದಾರೆ. ಆ ಕ್ಷೇತ್ರದ ಮಕ್ಕಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಪ್ರಾರಂಭ ಮಾಡಬೇಕು.

ಶ್ರೀ ಜೀವರಾಜ ಆಳ್ವ.-- ಅಧ್ಯಕ್ಷರೇ, ಜೂನಿಯರ್ ಕಾಲೇಜು ಅಂದರೆ ಈಗಲೇ ಆಶ್ವಾಸನೆ ಕೊಡಬಹುದು. ಆದರೆ ಫಸ್ಟ್ ಗ್ರೇಡ್ ಕಾಲೇಜ್ ಅವರು ಕೇಳುತ್ತಿರುವುದರಿಂದ ವಿಶ್ವವಿದ್ಯಾನಿಲಯದ ಒಪ್ಪಿಗೆ ಬೇಕಾಗುತ್ತದೆ. ಅದು ಬಂದಮೇಲೆ ಖಂಡಿತ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.-- ಒಪ್ಪಿಗೆ ಇಲ್ಲದೆ ಮಂಜೂರು ಮಾಡಿದ್ದೀರಿ.

ಅಧ್ಯಕ್ಷರು.-- ಮಾನ್ಯ ಲಕ್ಕಪ್ಪನವರೇ, ನೀವು ಮಾತನಾಡಿದ್ದು ಏನೂ ರೆಕಾರ್ಡ್ ಆಗುವುದಿಲ್ಲ. ನೀವು (ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ) ಶ್ರೀ ಓಂಕಾರ ಮೂರ್ತಿಯವರ ಪ್ರಶ್ನೆಗೆ ಉತ್ತರ ಕೊಡಿ*

(ಶ್ರೀ ಬಿ. ಲಕ್ಕಪ್ಪನವರು ನಿಂತೇ ಇದ್ದರು.)

ಶ್ರೀ ಬಿ. ಲಕ್ಕಪ್ಪ.— ಈ ಸದನದಲ್ಲಿ ಮಂಜೂರು ಮಾಡಿದ್ದೇನೆ ಎಂದು ಘೋಷಣೆ ಮಾಡಬೇಕು.

ಅಧ್ಯಕ್ಷರು.— ನಿಮ್ಮೊಬ್ಬರದೇ ಈ ಮನೆ ಅಂದುಕೊಂಡಿರಾ ?

ಶ್ರೀ ಬಿ. ಲಕ್ಕಪ್ಪ.-- ನಾನು ಕುಳಿತಿಲ್ಲ.

ಅಧ್ಯಕ್ಷರು.-- ಕೂರದಿದ್ದರೆ ಹಾಗೆ ನಿಂತ್ಕೊಳ್ಳಿ. Nothing will be recorded. ಇಷ್ಟೆಲ್ಲಾ ಹೇಳಿದರೂ ನೀವು ಹೀಗೆ ಮಾಡ್ತಿರಿ ಅಂದರೆ.....

ಶ್ರೀ ಕೆ. ಎಚ್. ಪಾಟೀಲ್.-- ಅಧ್ಯಕ್ಷರೆ, ದಯವಿಟ್ಟು .....

ಅಧ್ಯಕ್ಷರು.-- ಮಾನ್ಯ ಪಾಟೀಲರೇ, ಏನ್ರಿ ಇದು ? ಎಲ್ಲರೂ ಎದ್ದು ಒಂಟಿ ಕಾಲಿನಲ್ಲಿ ನಿಂತು ಕೊಳ್ಳುತ್ತಾರೆ. ಹಾಗಾದರೆ ನಾನೇನು ಮಾಡಲಿ ?

ಶ್ರೀ ಎಂ. ಎಸ್. ಪಾಟೀಲ್.— ಅವರು ಏನು ವೈಯಕ್ತಿಕವಾದ ಕೆಲಸ ಕೇಳುತ್ತಿದ್ದಾರಾ ?

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೇ, ...

MR. SPEAKER.—Nothing will be recorded, whatever you say, will not be recorded. It will be expunged.

ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು,

೫೨೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರಿನ ನಗರದಲ್ಲಿರುವ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಸದರಿ ಉಪನ್ಯಾಸಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು,

ಇ) ಕಳೆದ ಅಧಿವೇಶನದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಆಶ್ವಾಸನೆ ನೀಡಿದ್ದು ಸದರಿ ಆಶ್ವಾಸನೆಯನ್ನು ಪೂರೈಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

---

* (ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾನ್ಯ ಲಕ್ಕಪ್ಪನವರು ಹೇಳಿದ ಮಾತುಗಳನ್ನು ದಾಖಲಿಸಲಿಲ್ಲ)

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು):—

ಅ) ಈ ಕೆಳಕಂಡ ವಿಷಯಗಳಲ್ಲಿ ಮಾತ್ರ ಬೋಧಕರ ಕೊರತೆ ಇದ್ದು ಮಿಕ್ಕ ವಿಷಯಗಳಲ್ಲಿ ಬೋಧಕರ ಕೊರತಿ ಇರುವುದಿಲ್ಲ.

೧. ಇಂಗ್ಲೀಷ್	೧ ಉಪನ್ಯಾಸಕರು
೨. ರಾಜ್ಯಶಾಸ್ತ್ರ	೧ ಉಪನ್ಯಾಸಕರು
೩. ಪ್ರಾಣಿಶಾಸ್ತ್ರ	೧ ಉಪನ್ಯಾಸಕರು

ಆ) ಮೂರು.

ಇ) ೨೯೨ ಉಪನ್ಯಾಸಕರ ಹುದ್ದೆಗಳನ್ನು ಸೃಷ್ಟಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಹುದ್ದೆಗಳು ಸೃಷ್ಟಿಯಾದ ನಂತರ, ಸದರಿ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗುವುದು.

ಶ್ರೀ ಪಿ.ಬಿ. ಓಂಕಾರ ಮೂರ್ತಿ (ಶ್ರೀ ಐ. ಬಿ. ಶಂಕರ್ ಪರವಾಗಿ).—ಮಾನ್ಯ ಅಧ್ಯಕ್ಷರೆ, 'ಆ' ಪ್ರಶ್ನೆಗೆ ಉತ್ತರವಾಗಿ ಮೂರು ಹುದ್ದೆಗಳು ಖಾಲಿ ಇದೆ ಎಂದು ಹೇಳಿದ್ದಾರೆ. ನನಗೆ ತಿಳಿದು ಬಂದಿರುವುದು ೧೫ ಜನ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ ಎಂದು. ಕಳೆದ ವರ್ಷ ಮೂರು ಜನ ಉಪನ್ಯಾಸಕರನ್ನು ಅಪಾಯಿಂಟ್ ಮಾಡಲಿಲ್ಲ. ಉಪನ್ಯಾಸಕರಿಲ್ಲ ಎಂದು ವಿದ್ಯಾರ್ಥಿಗಳಿಂದ ಮಾಷ್ಕರ ಗಲಾಟೆಗಳು ಆಗುತ್ತಿವೆ. ಬೋಧಕರಿಲ್ಲದಿರುವುದರಿಂದ ಬಹುತೇಕ ವಿದ್ಯಾರ್ಥಿಗಳು ಪಾಸ್ ಆಗಿಲ್ಲ. ೨೯೨ ಹುದ್ದೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದನ್ನು ಯಾವಾಗ ಮಾಡುತ್ತೀರಿ? ಬಹಳ ತಡವಾದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ? ಆದಷ್ಟು ಮಟ್ಟಿಗೆ ಈ ತಿಂಗಳಲ್ಲೇ ಅಪಾಯಿಂಟ್ ಮಾಡಿದರೆ ಅನುಕೂಲವಾಗುತ್ತದೆ. ಅದನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಜೀವರಾಜ ಆಳ್ವ.—೨೯೨ ಹುದ್ದೆಗಳನ್ನು ಆದಷ್ಟು ಜಾಗ್ರತೆ ಮಾಡುತ್ತಿದ್ದೇವೆ. ಈಗ ರಾಜ್ಯಶಾಸ್ತ್ರ, ವಾಣಿಜ್ಯ ಶಾಸ್ತ್ರ ಮತ್ತು ಗಣಿತ ಶಾಸ್ತ್ರದಲ್ಲಿ ಅಂಶಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿದ್ದೇವೆ. ಪಾಠ ಪ್ರವಚನಗಳು ಚೆನ್ನಾಗಿ ನಡೆಯುತ್ತಿದೆ.

ಶ್ರೀ ಪಿ.ಬಿ. ಓಂಕಾರ ಮೂರ್ತಿ.—ಈ ತಿಂಗಳಲ್ಲೇ ಮಾಡಬೇಕು.

ಶ್ರೀ ಜೀವರಾಜ ಆಳ್ವ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ : ೧೦೯ (೭೭೫)

ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಹಾಜರಿರಲಿಲ್ಲ.

ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ತರಬೇತಿ ಕೇಂದ್ರಗಳು.

೭೭೨. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೧೯೮೪-೮೫ನೇ ಸಾಲಿನಲ್ಲಿದ್ದ ಮತ್ತು ೧೯೮೫-೮೬ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲ್ಪಟ್ಟಿರುವ ಪ್ರಾಥಮಿಕ ದೈಹಿಕ ಶಿಕ್ಷಕರ ಕೇಂದ್ರಗಳೆಷ್ಟು? (ಜಿಲ್ಲಾವಾರು ಮಾಹಿತಿ ಅಗತ್ಯ)

ಆ) ದೈಹಿಕ ಶಿಕ್ಷಕರ ಹಾಲೀ ಪಠ್ಯಕ್ರಮ ಯಾವ ವರ್ಷ ಪರಿಷ್ಕೃತಗೊಂಡು ಜಾರಿಯಲ್ಲಿ ತರಲಾಗಿದೆ ಹಾಗೂ ಹಾಲೀ ಎಷ್ಟು ವಿಷಯಗಳನ್ನು ಅಭ್ಯಸಿಸಬೇಕಾಗಿದೆ?

ಇ) ದೈಹಿಕ ಶಿಕ್ಷಕರ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ ತಯಾರಿಸಲು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುವ ಅಧ್ಯಾಪಕರುಗಳ ಅರ್ಹತೆಗಳೇನು?